ಪದ ಹಾಡೋದನ್ನು ಕಲಿತೆ. ಜೊತೆಗೆ ನಮ್ಮವ್ವ ಕ್ಯಾತಮ್ಮ, ನನ್ನ ಸೋದರಮಾವ ಜಡಿಯಪ್ಪ ರಾತ್ರಿ ಹೊತ್ತಿನಾಗೆ ಇಬ್ಬರೇ ಕೂಡಿ ಸಣ್ಣದನಿಯಲ್ಲಿ ಹಾಡೋರು. ಆ ಸೊಲ್ಲು ಕೂಡ ನನ್ನ ಕಿವಿಮೇಲೆ ಬೀಳುತ್ತಿತ್ತು. ಆದರೂ ಅಪ್ಪನೇ ನನ್ನ ಮೊದಲ ಗುರು''.

ಹೀಗೆ ನೆನೆಸಿಕೊಳ್ಳುತ್ತಾ ಸಾವಿತ್ರಮ್ಮನವರು ಹಲವಾರು ಪದಗಳನ್ನು ನಮ್ಮೆದುರು ಮೈಮರೆತು ಹಾಡಿದರು. ಸಾವಿತ್ರಮ್ಮನವರ ಪ್ರತಿಭೆ ನೋಡಿ ನಿಜವಾಗಿಯೂ ನಾನು ತಲೆಬಾಗಿದೆ. ಇದುವರೆಗೆ ಇಂಥ ಅಸಲಿ ಪ್ರತಿಭೆಯನ್ನು ಯಾರೂ ಗುರುತಿಸಲಿಲ್ಲವಲ್ಲಾ ಎಂಬ ನೋವು ನನ್ನೊಳಗೆ ಉರಿಯಂತೆ ಸುಟ್ಟಿತು.

'ನಾರು ಬತ್ತಿ, ನೀರೆಣ್ಣೆ ನನ ಸಂಸಾರ' ಎನ್ನುವುದು ಕನ್ನಡದಲ್ಲಿ ಮಸುಕಾಗಿ ಕೇಳಿಬರುವ ಒಂದು ಗಾದೆ. ಈ ಮಾತು ಸಾವಿತ್ರಮ್ಮನವರ ಕುಟುಂಬದಲ್ಲಿ ಅಕ್ಷರಶಃ ನಿಜವಾಗಿದೆ. ದೀಪ ಉರಿಸಲು ಎಣ್ಣೆಯಿಲ್ಲದ ದಿನಗಳನ್ನೂ ಅವರು ಕಂಡಿದ್ದಾರೆ. ತಮ್ಮ ಬದುಕಿನಲ್ಲಿ ನಡೆದ, ಬಡತನಕ್ಕೆ ಸಂಬಂಧಿಸಿದ ಹತ್ತಾರು ಘಟನೆಗಳನ್ನು ಮುಗ್ಧವಾಗಿ ವಿವರಿಸುವಾಗ ಕೀಳರಿಮೆಯಿಲ್ಲದ ಪ್ರಖರ ಆತ್ಮವಿಶ್ವಾಸ ಅವರ ಮುಖದಲ್ಲಿ ದೀವಟಿಗೆಯಂತೆ ಉರಿಯುತ್ತಿತ್ತು. ಅವರ ಮಾತುಗಳಲ್ಲಿ ತೋರಾಣಿಕೆ ಇರಲಿಲ್ಲ.



ಸುಮಾರು ಅರವತ್ತರ ಸಮೀಪವಿರುವ ಸಾವಿತ್ರಮ್ಮ ನಿತ್ಯ ದುಡಿಮೆಯಲ್ಲಿರುವ ಸ್ವಾಭಿಮಾನಿ ಹೆಣ್ಣು. 'ಜುಂಜಪ್ಪನ ಕಾವ್ಯ', 'ಕರಡಿಬುಳ್ಳಪ್ಪನ ಕಾವ್ಯ', 'ಹೊನ್ನೆಮರದ ಈರಣ್ಣನ ಕಾವ್ಯ', 'ಚಿತ್ರದೇವರ ಕಾವ್ಯ', 'ವೀರದೊಡ್ಡಣ್ಣನ ಕಾವ್ಯ', ನೂರಾರು ಸಂಖ್ಯೆಯ ಹಸೆ ಹಾಡುಗಳು, ಸೋಬಾನೆ ಹಾಡುಗಳು, ಆರತಿ ಹಾಡುಗಳು, ವಿಶೇಷವಾಗಿ 'ದಾಸಯ್ಯನ ಹಾಡು'ಗಳನ್ನು ನಿಖರವಾದ ಕಂಠದಿಂದ ಎಡರು ತೊಡರಿಲ್ಲದಂತೆ ಹಾಡುತ್ತಾರೆ. ಇನ್ನೊಂದು ಮುಖ್ಯವಾದ ಸಂಗತಿ ಎಂದರೆ, ಸಾವಿತ್ರಮ್ಮ ತತ್ತ್ವಪದಗಳನ್ನೂ ತನ್ಮಯತೆಯಿಂದ ಹಾಡುತ್ತಾರೆ. ಅವರ ಹಟ್ಟಿಯಲ್ಲಿ ಎರಡು ಭಜನೆ ತಂಡಗಳಿವೆ (ತತ್ತ್ವಪದ ಗಾಯಕರು). ಎಲ್ಲರಿಗೂ ತಿಳಿದಿರುವಂತೆ ಕಾಡುಗೊಲ್ಲರು ಅಂಟು–ಮುಂಟಿನ ವಿಚಾರದಲ್ಲಿ ಬಹಳ ಕಟ್ಟುನಿಟ್ಟು! ಆದರೆ ಅವರು ಹೋಗುವ ಗುರುಮಠಗಳಲ್ಲಿ ಮಾತ್ರ ಯಾವ ಮುಡಿಚಟ್ಟುಗಳನ್ನು ಪಾಲಿಸುವುದಿಲ್ಲ. ಸಾವಿತ್ರಮ್ಮನವರೇ ಹೇಳುವಂತೆ, 'ಗುರುವಿನ ಸನ್ನಿಧಿಯಲ್ಲಿ ಯಾವ ಮುಡಿಚಟ್ಟೂ ಇರೋದಿಲ್ಲ!'

ಸಾವಿತ್ರಮ್ಮ ಗುರುಮಾರ್ಗದಲ್ಲಿರುವ ತತ್ತ್ವಸಾಧಕಿ. ತಮ್ಮ ಗುರು ದ್ಯಾವರಪ್ಪ ಅವರಿಂದ ಕಲಿತಿರುವ ಅಪರೂಪದ ತತ್ತ್ವಗಳನ್ನು ಸಾವಿತ್ರಮ್ಮ ನಮ್ಮ ಮುಂದೆ ಅದರ ಒಳಸತ್ವವನ್ನೇ ತೆರೆದಿಟ್ಟಂತೆ ಹಾಡಿದರು. ನಮ್ಮ ಮೌಖಿಕ ಪರಂಪರೆ ವರ್ತಮಾನದಲ್ಲೂ ಜೀವಂತಿಕೆಯಿಂದ ಮುಂದುವರಿಯಲು ಅಚಲ ಶ್ರದ್ಧೆಯ ಸಾವಿತ್ರಮ್ಮನಂತಹ ಕಲಾವಿದರೇ ಕಾರಣ ಎಂದು ಎಂತಹವರಿಗೂ ತಿಳಿಯುತ್ತದೆ.

ಆಧುನಿಕತೆಯ ಯಾವ ಸೋಂಕಿಗೂ ಒಳಗಾಗದ ಕಾಡುಗೊಲ್ಲರ ಸಂಸ್ಕೃತಿ, ಮೌಖಿಕ ಸಂಪ್ರದಾಯದಿಂದ ಬಂದಿರುವ ಜ್ಞಾನ ಮತ್ತು ವಿವೇಕದಲ್ಲೇ ತಮ್ಮ ಬದುಕಿನ ಸಾರ್ಥಕತೆಯನ್ನು ಕಂಡುಕೊಂಡಿದೆ. ಹಾಡು, ಕಲೆ, ಪಶುಸಂಗೋಪನೆ, ಆವಿನ ಗೂಡು (ದನಗಳ ರೊಪ್ಪ) ವೈದ್ಯಪದ್ಧತಿ, ಕುರಿ ಸಾಕಾಣಿಕೆ, ಈರಗಾರ ದೈವಗಳು ಇವೇ ಕಾಡುಗೊಲ್ಲರ ಸಾಂಸ್ಕೃತಿಕ ಸಂಪತ್ತು. ಇವರು ತಮ್ಮ ಸಾಂಸ್ಕೃತಿಕ ಅಸ್ಮಿತೆಗಳ ಮೇಲೆ ಅನ್ಯರ ಯಾವುದೇ ನಿಯಂತ್ರಣಗಳನ್ನು ತಾಳಿಕೊಳ್ಳಲಾರರು.

ಈಗಲೂ ಯಾವುದೇ ಗೊಲ್ಲರಹಟ್ಟಿಗಳಲ್ಲಿ ನಡೆಯುವ ಮದುವೆ, ಹಸೆ ಹಾಗೂ ದೇವರ ಕಾರ್ಯಗಳಿಗೆ ತಪ್ಪದೆ ಹೋಗಿ ತಮ್ಮ ತಂಡದೊಂದಿಗೆ ಸಾವಿತ್ರಮ್ಮ ಹಾಡುತ್ತಾರೆ. ಅನೇಕ ಸಲ ಮನೆಯಲ್ಲಿ ಬೀಸುವುದೋ, ಕುಟ್ಟುವುದೋ, ಕಳೆ ಕೀಳುವುದೋ ಕೆಲಸವಿದ್ದಾಗ ಕರೆಯಲು ಬಂದವರು 'ಅಕ್ಕಾ ನೀನೀಗ ಬಂದುಬಿಡು, ನಾಳೆ ನಿಮ್ಮ ಮನೆ ಕೆಲಸ, ಹೊಲದ ಕೆಲಸವನ್ನೆಲ್ಲಾ ನಾವೇ ಮಾಡಿಕೊಡುತ್ತೇವೆ' ಎಂದು ಅವರನ್ನು ತಮ್ಮ ಜೊತೆ ಕರೆದುಕೊಂಡು ಹೋಗುತ್ತಾರೆ. ಮರುದಿನ ಅವರೆಲ್ಲ ಮುಯ್ಯಾಳುಗಳಂತೆ ಬಂದು ಇವರ ಹೊಲ ಮತ್ತು ಮನೆ ಕೆಲಸಗಳನ್ನು ಮಾಡಿಕೊಡುತ್ತಾರೆ. ಸಾವಿತ್ರಮ್ಮ ತಮ್ಮ ಬದುಕಿನಲ್ಲಿ ಗಳಿಸಿರುವ ದೊಡ್ಡ ಸಂಪತ್ತೆಂದರೆ ಇದೇ!

'ಎಷ್ಟೋ ದಿನ ಗಂಡನಿಗೇ ಹೇಳದೆ ಹೋಗಿ ಹಾಡಿ ಬಂದಿದ್ದೇನೆ' ಎಂದು ಹೇಳುತ್ತಾರೆ ಸಾವಿತ್ರಮ್ಮ. ಜುಂಜಪ್ಪನನ್ನು ಕುರಿತು ಹಾಡುವುದೆಂದರೆ ಸಾವಿತ್ರಮ್ಮನವರಿಗೆ ಮೈಮೇಲೆ ಜುಂಜಪ್ಪನೇ ಒಲಿದುಬಂದಂತೆ. 'ಜುಂಜಪ್ಪನಂಥ ದೇವರು ಯಾರಿದ್ದಾರು! ಅವನು ಬದುಕಿದ ಬಾಳು, ಗೋವುಗಳಿಗಾಗಿ ಅವನು ಪಟ್ಟಪಾಡು ಅಷ್ಟಿಷ್ಟಲ್ಲ! ಅದ್ಕೆ ನಾನು ಅವನ ಪದವನ್ನೇ ಹೆಚ್ಚಾಗಿ ಹಾಡುತ್ತೇನೆ' ಎಂದು ಹೇಳುತ್ತಲೇ ಜುಂಜಪ್ಪನ ಮತ್ತೊಂದು ಹಾಡಿಗೆ ದನಿಯಾದರು.

ಪ್ರತಿಕ್ರಿಯಿಸಿ: **feedback@sudha.co.in**

